ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ: ಸಿ5(3) ಕಡತ ವಿಲೇವಾರಿ 47/2019–20 ದಿನಾಂಕ: 12-12-2019

## :: ಬಹಿರಂಗ ಹರಾಜು ಪ್ರಕಟಣೆ ::

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು–560001 ಈ ಕಛೇರಿಯ ಅಭಿಲೇಖಾಲಯದ ಸಿ, ಡಿ ಮತ್ತು ಇ ಶ್ರೇಣಿಯ ಹಳೇ ಕಡತಗಳನ್ನು ದಿನಾಂಕ: 21–12–2019 ರಂದು ಮಧ್ಯಾಹ್ನ 3.00 ಗಂಟೆಗೆ ಬಹಿರಂಗ ಹರಾಜಿನಲ್ಲಿ ವಿಲೇ ಮಾಡಲಾಗುವುದು. ಆದ್ದರಿಂದ ಆಸಕ್ತ ಖರೀದಿದಾರರು ಕೆಳಕಂಡ ನಿಬಂಧನೆಗಳನ್ವಯ ಹರಾಜಿನಲ್ಲಿ ಭಾಗವಹಿಸಲು ತಿಳಿಸಿದೆ.

| ಕ್ರ.ಸಂ | ಸಿ ವಿಲೇವಾರಿ ಕಡತಗಳು | ಡಿ ವಿಲೇವಾರಿ ಕಡತಗಳು | ಇ ವಿಲೇವಾರಿ ಕಡತಗಳು | ಒಟ್ಟು ವಿಲೇವಾರಿ ಕಡತಗಳು |
|---|---|---|---|---|
| 1 | 1621 | 488 | 2630 | **4739** |

**ನಿಬಂಧನೆಗಳು :–**

1. "ಎಲ್ಲಿ ಹೇಗಿದೆಯೋ ಹಾಗೆ" (As in Where Basis condition) ಸ್ಥಿತಿಯಲ್ಲಿ ವಿಲೇವಾರಿ ಮಾಡಲಾಗುವುದು.
2. ಹರಾಜು ಮಾಡಲಾಗುವ ಕಡತಗಳನ್ನು ಕಛೇರಿಯ ಅಭಿಲೇಖಾಲಯದಲ್ಲಿ ಕ್ರೂಢೀಕರಿಸಿ ಇಡಲಾಗಿದ್ದು, ದಿನಾಂಕ: 12–12–2019 ರಿಂದ ದಿನಾಂಕ: 20–12–2019 ರವರೆಗೆ ಆಸಕ್ತ ಖರೀದಿದಾರರು ಖುದ್ದಾಗಿ 3.00 ರಿಂದ 4.30 ಗಂಟೆಯವರೆಗೆ ಕಛೇರಿಗೆ ಹಾಜರಾಗಿ ಹಳೇ ಕಡತಗಳನ್ನು ವೀಕ್ಷಿಸಲು ಅವಕಾಶವಿರುತ್ತದೆ.
3. ಸರಬರಾಜು ಮಾಡುವ ಸಂಸ್ಥೆ /ಏಜೆನ್ಸಿಗಳು ನಿಯಮಾನುಸಾರ ನೊಂದಣಿಯಾಗಿರಬೇಕು (ದಾಖಲೆ ಲಗತ್ತಿಸುವುದು)
4. ಸರಬರಾಜು ಸಂಸ್ಥೆಯು ಕಪ್ಪುಪಟ್ಟಿಯಲ್ಲಿ ಇರಬಾರದು.
5. ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆಯಿಂದ ಪಡೆದ ಜಿಎಸ್ಟಿ ಸಂಖ್ಯೆಯನ್ನು ಹೊಂದಿರಬೇಕು.
6. ಕಳೆದ ಎರಡು ವರ್ಷಗಳಲ್ಲಿ ಗೌಪ್ಯ ಕಾಗದಗಳನ್ನು ವಿಲೇವಾರಿ ಮಾಡಿದ ಅನುಭವವನ್ನು ಹೊಂದಿರಬೇಕು. ಈ ಸಂಬಂಧ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕು.
7. ಹರಾಜಿನಲ್ಲಿ ಪಡೆದ ಕಡತ / ಕಾಗದ ಪತ್ರಗಳನ್ನು ಯಾವುದೇ ಕಾರಣಕ್ಕೂ ಮರು ಉಪಯೋಗ, ಮರು ಬಳಕೆ ಮಾಡಬಾರದು. ಕಛೇರಿ ಕಡತ/ಕಾಗದ ಪತ್ರಗಳ ರಹಸ್ಯ/ಗೌಪ್ಯತೆಯನ್ನು ಕಡ್ಡಾಯವಾಗಿ ಕಾಪಾಡುವುದು. ಯಾವುದೇ ರೀತಿಯ ಕಡತ/ಕಾಗದ ಪತ್ರಗಳ ಗೌಪ್ಯತೆಗೆ ದಕ್ಕೆಯಾದಲ್ಲಿ ಸಂಸ್ಥೆಯು ನೇರ ಜವಾಬ್ದಾರರಾಗಿರುತ್ತಾರೆ.
8. ಕರ್ನಾಟಕ ಸರ್ಕಾರದ ಬೇರೆ ಇಲಾಖೆಗಳಿಗೆ ಸೇವೆಯನ್ನು ಒದಗಿಸಿರುವ ಅನುಭವದ ಧೃಡೀಕೃತ ಪತ್ರವನ್ನು ಒದಗಿಸತಕ್ಕದ್ದು.
9. ಹರಾಜಿನಲ್ಲಿ ಭಾಗವಹಿಸುವ ಆಸಕ್ತ ಖರೀದಿದಾರರು ರೂ 10,000=00 (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳ ಠೇವಣಿ ಹಣವನ್ನು ಹರಾಜಿನ ದಿನಾಂಕದ ಮೂರು ದಿನ ಮುಂಚಿತವಾಗಿ ಈ ಕಛೇರಿಗೆ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ರವರ ಹೆಸರಿಗೆ ಬ್ಯಾಂಕ್ ಹುಂಡಿ ಮುಖಾಂತರ ಜಮಾ ಮಾಡುವುದು ಹಾಗೂ ಪಾನ್‌ಕಾರ್ಡ್ ನಕಲು ಮತ್ತು ಫೋಟೋ ಗುರುತಿನ ಚೀಟಿಯ ನಕಲು ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.
10. ಹರಾಜಿನಲ್ಲಿ ಯಶಸ್ವಿಯಾಗುವ ಖರೀದಿದಾರರು ಹರಾಜು ಮೊತ್ತದ 50% ಮೊತ್ತವನ್ನು ಸ್ಥಳದಲ್ಲಿ ಪಾವತಿಸಬೇಕಿದ್ದು, ಉಳಿಕೆ 50% ಮೊತ್ತವನ್ನು ಹರಾಜಿನ ನಂತರದ ಮೂರು ಕೆಲಸದ ದಿನಗಳ ಒಳಗೆ ಪಾವತಿ ಮಾಡಬೇಕಿರುತ್ತದೆ. ಹಣವನ್ನು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಹೆಸರಿಗೆ ಬ್ಯಾಂಕ್ ಹುಂಡಿ ಮುಖಾಂತರ ಪಾವತಿಸುವುದು.
11. ಹರಾಜಿನಲ್ಲಿ ಹೆಚ್ಚಿನ ದರ ಸೂಚಿಸುವ ಖರೀದಿದಾರರಿಗೆ ಕಡತ ವಿಲೇ ಮಾಡಲಾಗುವುದು.

12. ಅಭಿಲೇಖಾಲಯದ ಹಳೇ ಕಡತಗಳನ್ನು ಒಂದೇ ಲಾಟ್‌ನಲ್ಲಿ ಹರಾಜು ಮಾಡಲಾಗುತ್ತದೆ. ಯಾವುದೇ ರೀತಿಯಲ್ಲಿ ವಸ್ತುಗಳ ವ್ಯತ್ಯಾಸಕ್ಕೆ ಕಛೇರಿ ಜವಾಬ್ದಾರಿಯಾಗುವುದಿಲ್ಲ. ಆದ್ದರಿಂದ ಬಿಡ್ಡುದಾರನು ಕಛೇರಿಯಲ್ಲಿರುವ ಎಲ್ಲಾ ಹಳೆಯ ಕಡತಗಳನ್ನು ಪರಿಶೀಲಿಸಬಹುದು. ಯಶಸ್ವಿ ಬಿಡ್ಡುದಾರನು ಬಿಡ್ಡಿಂಗ್ ಮಾಡಿದ ನಂತರ ಈ ವಿಷಯದಲ್ಲಿ ಯಾವುದೇ ಆಕ್ಷೇಪಣೆಯನ್ನು ಸ್ವೀಕರಿಸುವುದಿಲ್ಲ.
13. ಹರಾಜಿನಲ್ಲಿ ಪಡೆಯುವ ಕಡತ / ಕಾಗದ ಪತ್ರಗಳನ್ನು ವಿಲೇ ಯಂತ್ರದಲ್ಲಿ ತುಂಡರಿಸಿ ನಂತರ ಸಾಗಾಣಿಕೆ ಮಾಡುವುದು.
14. ಅಭಿಲೇಖಾಲಯ ಕಟ್ಟಡವು 100 ವರ್ಷಗಳ ಹಳೆಯ ಕಟ್ಟಡವಾಗಿದ್ದು, ಕಟ್ಟಡಕ್ಕೆ ದಕ್ಕೆಯಾಗದಂತೆ ಹಾಗೂ ಯಾವುದೇ ಲೋಪದೋಷಗಳಾಗದಂತೆ ಅಗತ್ಯ ಮುಂಜಾಗ್ರತ ಕ್ರಮಗಳನ್ನು ಕೈಗೊಂಡು ಕಡತಗಳನ್ನು ವಿಲೇ ಮಾಡುವುದು ಹಾಗೂ ಕಟ್ಟಡಕ್ಕೆ ಯಾವುದೇ ರೀತಿಯ ಹಾನಿಯಾದಲ್ಲಿ ಸರಿಪಡಿಸಿ ಕೊಡುವ ಜವಾಬ್ದಾರಿ ಸದರಿ ಸಂಸ್ಥೆಯದ್ದಾಗಿರುತ್ತದೆ.
15. ಒಂದು ಪಕ್ಷ ನಿಗಧಿತ ದಿನಾಂಕದಂದು ಅನಿವಾರ್ಯ ಕಾರಣಗಳಿಂದ ಹರಾಜು ಪ್ರಕ್ರಿಯೆ ಮಾಡಲು ಆಗದಿದ್ದಲ್ಲಿ ಮುಂದಿನ ಕಾರ್ಯನಿರ್ವಹಣಾ ದಿನ ಸಾಯಂಕಾಲ 4.00 ಗಂಟೆಗೆ ಹರಾಜು ಮಾಡಲಾಗುವುದು.
16. ಹರಾಜನ್ನು ಮುಂದೂಡುವ, ರದ್ದು ಮಾಡುವ ಅಥವಾ ನಿಬಂಧನೆಯನ್ನು ಮಾರ್ಪಡಿಸುವ ಅಧಿಕಾರ ಮಾನ್ಯ ಆಯುಕ್ತರು ಹೊಂದಿರುತ್ತಾರೆ.
17. ಯಾವುದೇ ಖರೀದಿದಾರರು ಸೂಚಿಸುವ ದರವನ್ನು ಒಪ್ಪುವ ಅಥವಾ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ಮಾನ್ಯ ಆಯುಕ್ತರು ಹೊಂದಿರುತ್ತಾರೆ. ಈ ಬಗ್ಗೆ ಯಾವುದೇ ತಕರಾರುಗಳಿಗೆ ಅವಕಾಶವಿರುವುದಿಲ್ಲ.

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

**[ಅರುಳ್ ಕುಮಾರ್]**
**ಜಂಟಿ ನಿರ್ದೇಶಕರು[ಆಡಳಿತ]**
12/12

**<u>ಈ ಬಹಿರಂಗ ಹರಾಜು ಪ್ರಕಟಣೆಯನ್ನು ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿ, ಈ ಕುರಿತು ವ್ಯಾಪಕ ಪ್ರಚಾರವನ್ನು ನೀಡಲು ಕೋರಿದೆ.</u>**

**ಇವರುಗಳಿಗೆ,**

1. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕೆಂಪೇಗೌಡ ರಸ್ತೆ, ಬೆಂಗಳೂರು 560001.
2. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು ಜಿಲ್ಲಾ ಪಂಚಾಯತ್, ಬನಶಂಕರಿ, ಬೆಂಗಳೂರು.
3. ಪ್ರಾದೇಶಿಕ ಸಾರಿಗೆ ಆಯುಕ್ತರ ಕಛೇರಿ, ಕೋರಮಂಗಲ ಬೆಂಗಳೂರು.
4. ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ ಕಛೇರಿ, ನೃಪತುಂಗರಸ್ತೆ, ಬೆಂಗಳೂರು.
5. ಜಂಟಿ ಆಯುಕ್ತರು, ಅಬಕಾರಿ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
6. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಕಛೇರಿ, ಬನಶಂಕರಿ, ಬೆಂಗಳೂರು.
7. ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಕೆ.ಆರ್.ವೃತ್ತ ಬೆಂಗಳೂರು.
8. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ, ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
9. ನಿರ್ದೇಶಕರು, ಉರ್ದು ಮತ್ತು ಅಲ್ಪಸಂಖ್ಯಾತ ಭಾಷೆಗಳ ನಿರ್ದೇಶನಾಲಯ, ನೃಪತುಂಗರಸ್ತೆ, ಬೆಂಗಳೂರು.
10. ಸಹನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆಂಪೇಗೌಡ ರಸ್ತೆ, ಬೆಂಗಳೂರು.
11. ಬೆಂಗಳೂರು ಜಿಲ್ಲೆಯ ವ್ಯಾಪ್ತಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ) / ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಬೆಂಗಳೂರು ಜಿಲ್ಲೆಯ ವ್ಯಾಪ್ತಿಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
12. ಇ-ಆಡಳಿತ ಶಾಖೆಯಿಂದ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
13. ಸಹಾಯಕ ನಿರ್ದೇಶಕರು, ಅಭಿಲೇಖಾಲಯ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
14. ಕಛೇರಿ ಪ್ರತಿ.